# ನರೇಂದ್ರ ಸ್ವಾಮಿ ವಿವೇಕಾನಂದರಾದುದು ಹೇಗೆ ?

ಕುಮಾರಿ ಸ್ವರ್ಣಗೌರಿ

**ನರೇಂದ್ರ ವಿವೇಕಾನಂದರಾಗಿ ಪರಿವರ್ತನಗೊಂಡುದು ಇತಿಹಾಸದ ಒಂದು ಅಪೂರ್ವ ಘಟನೆ. ಅವರ ಜೀವನದಲ್ಲಿ ಈ ಬೆಳವಣಿಗೆಯ ವಿವಿಧ ಹಂತಗಳನ್ನು ಗುರುತಿಸುವುದೇ ಈ ಲೇಖನದ ಉದ್ದೇಶ. ಕುಮಾರಿ ಸ್ವರ್ಣಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು.**

"ಮಗನನ್ನು ಕೊಡು ಎಂದು ನಾನು ಬೇಡಿದರೆ ಶಿವನು ತನ್ನ ಗಣದಲ್ಲಿದ್ದ ಯಾವುದೊ ಒಂದು ತಂಟಲುಮಾರಿ ಭೂತವನ್ನು ಕಳುಹಿಸಿದ್ದಾನೆ" ಎಂದು ಬಿರುಗಾಳಿಯ ಸಂನ್ಯಾಸಿ, ಭಾರತದ ಯೋಧಪ್ರವಾದಿ, ಪುರುಷಸಿಂಹ, ನವಭಾರತ ನಿರ್ಮಾಪಕ ಪ್ರವಾದಿ, ವಿಶ್ವಮಾನವ ಎಂದೆಲ್ಲ ವ್ಯಕ್ತಿವೈಶಿಷ್ಟ್ಯಗಳಿಂದ ವಿಖ್ಯಾತರಾಗಿರುವ ಸ್ವಾಮಿ ವಿವೇಕಾನಂದರನ್ನು ಕುರಿತು ಒಮ್ಮೆ ಅವರ ತಾಯಿ ಭುವನೇಶ್ವರಿ ದೇವಿ ಉದ್ಗರಿಸಿದರು.

"ಅಷ್ಟೊಂದು ತುಂಟನಾಗಿದ್ದನೆ?" ಎಂದು ಪಾಶ್ಚಾತ್ಯ ಶಿಷ್ಯರೊಬ್ಬರು ಕೇಳಿದಾಗ ಆಕೆ, "ಓಹ್! ಆತನ ಸಂರಕ್ಷಣೆ ಮಾಡಲು ನಾನು ಇಬ್ಬರು ದಾದಿಯರನ್ನು ನೇಮಕ ಮಾಡಬೇಕಾಯಿತು" ಎಂದರು ನಗುನಗುತ್ತಾ. ಪ್ರಪಂಚವನ್ನೇ ಅಲುಗಾಡಿಸಿದ ಈ ಪ್ರಚಂಡ ಶಕ್ತಿಯನ್ನು ಆ ಪುಟ್ಟ ದೇಹ ಇನ್ನು ಹೇಗೆ ಭರಿಸೀತು? ತಮ್ಮಲ್ಲಿದ್ದ ಈ ರಜೋಶಕ್ತಿಯ ಬಗ್ಗೆ ಮುಂದೆ ಸ್ವಾಮಿ ವಿವೇಕಾನಂದರೇ ತಮ್ಮ ಪಾಶ್ಚಾತ್ಯ ಶಿಷ್ಯರಾದ ಇ.ಟಿ. ಸ್ಟರ್ಡಿ ಬಳಿ ಹೀಗೆ ಹೇಳುತ್ತಿದ್ದರು: "ನನ್ನೊಳಗಿನಿಂದ ಒಂದು ಅದಮ್ಯ ಶಕ್ತಿ ಸದಾ ಹೊರಸೂಸುತ್ತಿತ್ತು. ಆಗ ನಾನು ಚಂಚಲನಾಗುತ್ತಿದ್ದೆ. ಸುಮ್ಮನಿರಲು ಸಾಧ್ಯವೇ ಆಗುತ್ತಿರಲಿಲ್ಲ. ಸದಾ ಚಡಪಡಿಸುತ್ತಿದ್ದೆ. ಮೂರು ನಾಲ್ಕು ದಿನ ಸುಮ್ಮನೆ ಕೂರಿಸಿಬಿಟ್ಟರೆ ಹುಷಾರು ತಪ್ಪಿಬಿಡುತ್ತಿದ್ದೆ ಅಥವಾ ಹುಚ್ಚನಾಗಿ ಬಿಡುತ್ತಿದ್ದೆ."

> ವಿವೇಕಾನಂದರು ಶಕ್ತಿಯ ಮೂರ್ತರೂಪರಾಗಿದ್ದರು. ಕ್ರಿಯೆಯೇ ಮಾನವರಿಗೆ ಅವರು ನೀಡಿದ ಸಂದೇಶ
>
> *– ರೋಮೈ ರೋಲಾ*

ಎಲ್ಲ ತಾಯಂದಿರ ಹೆಬ್ಬಯಕೆಯಂತೆ ಪುತ್ರರತ್ನನನ್ನು ಕರುಣಿಸು ಎಂದು ಕಾಶಿ ವಿಶ್ವನಾಥನ ಮೊರೆಹೊಕ್ಕು ವ್ರತಗಳನ್ನಾಚರಿಸಿ ಹರಕೆಗಳನ್ನು ಹೊತ್ತ ತಾಯಿ ಭುವನೇಶ್ವರಿಯು ಕ್ರಿ.ಶ. ೧೮೬೩ನೆಯ ಸಂವತ್ಸರದ ಜನವರಿ ೧೨ರಂದು ಪುಷ್ಯ ಸಂಕ್ರಾಂತಿಯ ಪುಣ್ಯ ಪ್ರಭಾತದಲ್ಲಿ ದಿವ್ಯಶಿಶುವಿಗೆ ಜನ್ಮವಿತ್ತಳು. ಮನೆಮನೆಯಲ್ಲಿಯೂ ಪುಷ್ಯ ಸಂಕ್ರಾಂತಿಯ ಹಬ್ಬದ ಆನಂದೋತ್ಸವ ಮುಂದೆ ವಿಶ್ವಮಾನವನಾಗುವ ಈ ಶಿಶುವಿಗೆ ಸ್ವಾಗತವೀಯುತ್ತಿರುವುದೇನೊ ಎನ್ನುವಂತಿತ್ತು. ಶಿವನ ಅನುಗ್ರಹದಿಂದ ಜನಿಸಿದ ನೆನಪಾರ್ಥವಾಗಿ ತಾಯಿ ಶಿಶುವನ್ನು "ವೀರೇಶ್ವರ" ಎಂದು ಕರೆದಳು. ಇದೇ ಬಾಲಕನು ಮುಂದೆ ನರೇಂದ್ರನಾಥ, ನರೇನ್ ಎಂದು ಕರೆಯಲ್ಪಟ್ಟನು. ಬಾಲಕ ನರೇನನು ಬಹಳ ತುಂಟನೂ ನಿರ್ಭೀತನೂ ಆಗಿದ್ದನು. ಅಕ್ಕಂದಿರನ್ನು ಪೀಡಿಸುವುದೆಂದರೆ ಬಲು ಮೋಜು. ಸಾಮ, ದಾನ, ಭೇದ, ದಂಡನೆಗಳಿಗೆ ಜಗ್ಗದಿದ್ದರೂ ಒಂದು ವಿಷಯದಲ್ಲಿ ಅವನಿಗೆ ಭೀತಿಯಿರುವುದನ್ನು ತಾಯಿ ಕಂಡು ಹಿಡಿದಿದ್ದಳು. "ನೋಡು, ಬಿಲೇ (ತಾಯಿ ಮಗನನ್ನು ಮುದ್ದಿನಿಂದ ಕರೆಯುತ್ತಿದ್ದ ಹೆಸರು) ನೀನು ಹೀಗೆಲ್ಲ ತಂಟೆ ಮಾಡಿದರೆ ಶಿವನು ನಿನ್ನನ್ನು ಕೈಲಾಸಕ್ಕೆ ಸೇರಿಸುವುದೇ ಇಲ್ಲ" ಎಂದಾಕ್ಷಣವೇ ತಟಸ್ಥನಾಗಿಬಿಡುತ್ತಿದ್ದನು. ಅಥವಾ ಕಿವಿಯಲ್ಲಿ ಶಿವ!ಶಿವ! ಎನ್ನುತ್ತಾ ತಲೆಯಮೇಲೆ ತಂಬಿಗೆ ತಣ್ಣೀರು ಸುರಿದರೆ ಸುಮ್ಮನಾಗುತ್ತಿದ್ದನು. ಆದರೂ ಭಕ್ತಿಮತಿಯಾದ ತಾಯಿ ದೇವದೇವತೆಗಳ, ರಾಮಾಯಣ ಮಹಾಭಾರತಗಳ ಕಥೆಗಳನ್ನು ದಿನವೂ ಹೇಳುತ್ತಿರುವಾಗ ಮಂತ್ರಮುಗ್ಧನಂತೆ ಕೇಳುತ್ತಿದ್ದ. ಆಗ ಆ ರಜೋಶಕ್ತಿಯೆಲ್ಲ ಎಲ್ಲಿ ಮಾಯವಾಗುತ್ತಿತ್ತೋ?

ಆರನೆಯ ವರ್ಷದಲ್ಲಿ ಶಾಲೆಗೆ ಸೇರಿದ ಸ್ವಾತಂತ್ರ್ಯಪ್ರಿಯನಾದ ನರೇಂದ್ರನಿಗೆ ಶಾಲೆ ಸೆರೆಮನೆಯಾದರೂ ತನ್ನ ಸಮವಯಸ್ಕರ ಒಂದು ಚಿಕ್ಕ ತುಂಟರ ಗುಂಪನ್ನೇ ತಯಾರಿಸಿದನು. ಆಟಪಾಠಗಳಲ್ಲಿ ಸದಾ ಮುಂದು. ಈ ಎಳೆಯ ವಯಸ್ಸಿಗೇ ಸ್ಮರಣಶಕ್ತಿ, ಬುದ್ಧಿಶಕ್ತಿಗಳು ಅಗಾಧವಾಗಿತ್ತು. ಅದರೊಡನೆ ಹೃದಯ ವೈಶಾಲ್ಯತೆಯೂ ಕೂಡಿದ್ದರಿಂದ ಸೊಬಗು ಮತ್ತಷ್ಟು ಹೆಚ್ಚಿತು. ಅವನೆಂದಿಗೂ ಶಾಲೆಯಲ್ಲಿ ಪಾಠ ಕೇಳಲು ಸದಾ ಒಂದೆಡೆ ಕುಳಿತುಕೊಳ್ಳುತ್ತಿರಲಿಲ್ಲ. ಕೂರುವುದು ಹಾಗೂ ನಿಲ್ಲುವುದರೊಡನೆ ರಾಜಿ ಮಾಡಿಕೊಂಡಂತೆ ಇತ್ತು ಅವನ ಭಂಗಿ. ಸಣ್ಣ ಹುಡುಗರಿಗೆ ಅಪಾಯ ಕಾಲದಲ್ಲಿ ತನ್ನ ಕ್ಷೇಮವನ್ನೂ ಗಣನೆ ಮಾಡದೆ ಸಹಾಯ ಮಾಡುತ್ತಿದ್ದನು. ಬಡಬಗ್ಗರಿಗೆ ಮನೆಯಲ್ಲಿ ಏನು ಕೈಗೆ ಸಿಕ್ಕಿದರೆ ಅದನ್ನು ಕೊಟ್ಟುಬಿಡುತ್ತಿದ್ದನು. ಒಮ್ಮೆ ಆಟವಾಡುತ್ತಾ ಬಿದ್ದು ಹಣೆಯಿಂದ ಸ್ವಲ್ಪ ರಕ್ತ ಹರಿದುಹೋಯಿತು. ಈ ಘಟನೆಯನ್ನು ಕುರಿತು ಮುಂದೆ ಅವನ ಗುರುಗಳಾದ ಶ್ರೀರಾಮಕೃಷ್ಣರು, "ಅಷ್ಟು ಶಕ್ತಿ ಹರಿದುಹೋದದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಪ್ರಪಂಚವನ್ನೇ ನುಚ್ಚುನೂರುಗೊಳಿಸಿಬಿಡುತ್ತಿದ್ದನು" ಎನ್ನುತ್ತಿದ್ದರು ಹಾಸ್ಯವಾಗಿ. ಆದರೆ ಇಂತಹ ರಜಸ್ಸಿನಲ್ಲೂ ಅದ್ಭುತವಾದ ಸತ್ತ್ವದ ಮಿಶ್ರಣವೂ ಇತ್ತು. ಚಿಕ್ಕಂದಿನಿಂದ ನರೇಂದ್ರ ಧ್ಯಾನ

ಸಿದ್ಧನಾಗಿದ್ದನು. ಎಷ್ಟೋ ರಾತ್ರಿಗಳು ಗಾಢವಾದ ಧ್ಯಾನದಲ್ಲಿ ಕಳೆದುಹೋಗುತ್ತಿದ್ದವು.

ತಮ್ಮ ಬಾಲ್ಯಕಾಲದ ಅನುಭವವನ್ನು ಕುರಿತಾಗಿ ಅವರೇ ಹೀಗೆ ಹೇಳುತ್ತಾರೆ : "ನನ್ನ ಬಾಲ್ಯದಿಂದಲೂ ನಿತ್ಯವೂ ನಾನು ಮಲಗುತ್ತಲೇ ಎರಡು ಕನಸು ಕಾಣುತ್ತಿದ್ದವು. 'ನಾನು ಶ್ರೀಮಂತ, ಕೀರ್ತಿವಂತ, ಗೌರವಪೂಜಿತ, ಜಗತ್ತಿನ ಅತ್ಯಂತ ದೊಡ್ಡ ವಿಭೂತಿ ಪುರುಷ. ಈ ಹೆಗ್ಗಳಿಕೆಗೆ ನಾನು ಸಮರ್ಥ. ಹೀಗೆ ಒಂದು ಬಗೆಯ ಕನಸು. ಇನ್ನೊಂದು ಕನಸು ತೀರ ಬೇರೆ. ಅಲ್ಲಿ ನಾನು ಜಗತ್ತಿನ ಎಲ್ಲವನ್ನು ತ್ಯಾಗಮಾಡಿದ್ದೇನೆ. ಹಿಂದಿನ ಋಷಿಗಳಂತೆ ಕೌಪೀನ ಧಾರಿಯಾಗಿ, ಭಿಕ್ಷಾನ್ನ ತಿಂದು ಮರದಡಿಯಲ್ಲಿ ಮಲಗಿರುವುದು. ಹೀಗೆ ಇರಲೂ ನಾನು ಸಮರ್ಥ. ಈ ಎರಡು ಚಿತ್ರಗಳಲ್ಲಿ ಎರಡನೆಯದರದ್ದೇ ಕೈಮೇಲಾಯಿತು. ಈ ಹಾದಿಯಿಂದಲೇ ಪರಮ ಶ್ರೇಷ್ಠ ಆನಂದವೆಂದು ನನಗೆ ತೋರಿತು." ಒಂದು ವಿಶಿಷ್ಟ ರೀತಿಯಲ್ಲಿ ಈ ಎರಡೂ ಕನಸುಗಳು ಅವರ ಜೀವನದಲ್ಲಿ ನನಸಾದವೆಂದು ಹೇಳಬಹುದು.

ಕಾಲೇಜಿನ ಮೆಟ್ಟಿಲು ಏರುವುದರೊಳಗೆ ಅಗಾಧವಾದ ಪಾಂಡಿತ್ಯವನ್ನು ಗಳಿಸಿದ ನರೇಂದ್ರನು ಓದುವುದರಲ್ಲಿ ತಾನು ಗಳಿಸಿದ ವಿಶೇಷ ಶಕ್ತಿಯನ್ನು ಕುರಿತು ಮುಂದೆ ಹೀಗೆಂದು ಹೇಳುತ್ತಿದ್ದನು: "ಪುಸ್ತಕದ ಪ್ರತಿಯೊಂದು ಸಾಲನ್ನು ಓದದೆಯೇ ಲೇಖಕ ಏನು ಹೇಳುತ್ತಿದ್ದಾನೆಂದು ಅರ್ಥವಾಗುತ್ತಿತ್ತು. ಒಂದು ಪ್ಯಾರಾ ಅಥವಾ ಹಾಳೆಯ ಮೊದಲ ಮತ್ತು ಕೊನೆಯ ಸಾಲು ಓದುತ್ತಿದ್ದಂತೆ ಎಲ್ಲವೂ ಅರ್ಥವಾಗಿಬಿಡುತ್ತಿತ್ತು. ನಾಲ್ಕೈದು ಪುಟಗಳಲ್ಲಿ ಹೇಳಿರುವ ಹೊಸ ವಿಷಯವನ್ನು ಕೆಲವೇ ಸಾಲುಗಳನ್ನು ಓದಿ ಗ್ರಹಿಸಿಬಿಡುತ್ತಿದ್ದೆ." ನರೇಂದ್ರನಲ್ಲಿ ಹುದುಗಿದ್ದ ಈ ಅಪ್ರತಿಮ ಪ್ರತಿಭೆ ಹಾಗೂ ಶಕ್ತಿಯನ್ನು ಗುರುತಿಸಿದ ಕಾಲೇಜಿನ ಪ್ರಿನ್ಸಿಪಾಲರಾದ ವಿಲಿಯಂ ಹೇಸ್ಟಿಯವರು ಹೀಗೆ ಉದ್ಗರಿಸಿದರು: "ನರೇಂದ್ರನಾಥನು ಸತ್ಯವಾಗಿಯೂ ಒಬ್ಬ ಅಸಾಧಾರಣ ಪ್ರತಿಭಾವಂತ. ನಾನು ದೇಶದ ಉದ್ದಗಲಕ್ಕೆ ಸಂಚರಿಸಿರುವೆ. ಆದರೆ ಇಂತಹ ಶಕ್ತಿ ಸಾಮರ್ಥ್ಯಗಳುಳ್ಳ ಹುಡುಗನನ್ನು ಜರ್ಮನಿ ವಿಶ್ವವಿದ್ಯಾನಿಲಯದ ತತ್ತ್ವಜ್ಞಾನ ವಿದ್ಯಾರ್ಥಿಗಳ ಪೈಕಿಯೂ ಕಾಣಲಿಲ್ಲ."

ಕಾಲೇಜಿನ ವ್ಯಾಸಂಗದ ಜೊತೆ ಜೊತೆಗೆ ಪಾಶ್ಚಾತ್ಯ ವಿಜ್ಞಾನ ಶಾಸ್ತ್ರಗಳ ಅಧ್ಯಯನ ಮಾಡಿದನು. ಹೊಸ ಹೊಸ ದರ್ಶನ ಶಾಸ್ತ್ರಗಳನ್ನು ಓದಿದನು. ಇವೆಲ್ಲದರ ಪರಿಣಾಮವಾಗಿ ಆತನ ವಿಚಾರಶಕ್ತಿಯು ಜಾಗೃತವಾಯಿತು. ಹಾಗೇ ಸಂದೇಹಗಳೂ ಹೆಚ್ಚಿದವು. ಹೃದಯದಲ್ಲಿ ತುಮುಲಯುದ್ಧ ಪ್ರಾರಂಭವಾಯಿತು. ಜನ್ಮತಃ ಆತನಲ್ಲಿದ್ದ ಸಂಸ್ಕಾರ, ವಿಶ್ವಾಸಗಳು ನಷ್ಟವಾದವು. ಸತ್ಯ ಲಾಭಕ್ಕಾಗಿ ವ್ಯಾಕುಲಚಿತ್ತನಾದನು. ಆಧ್ಯಾತ್ಮಿಕ ತೃಷೆ ಹೆಚ್ಚಿದಂತೆಲ್ಲ ಆತನ ಅನ್ವೇಷಣೆಯೂ ಹೆಚ್ಚಿತು. ಅನೇಕ ವ್ಯಕ್ತಿಗಳನ್ನು ಸಂದರ್ಶಿಸಿ ಪ್ರಶ್ನೆ ಮಾಡಿದನು. ಆದರೆ ಯಾರಿಂದಲೂ ಸಮರ್ಪಕ ಉತ್ತರವಿಲ್ಲ. ಸನಾತನ ಧರ್ಮ, ವೇದಗಳು, ಉಪನಿಷತ್ತುಗಳು, ಷಡ್ದರ್ಶನಗಳು, ಕಾಂಟ್, ಹೇಗಲ್, ಅರಿಸ್ಟಾಟಲ್, ಪ್ಲೇಟೊ, ವ್ಯಾಸ ವಾಲ್ಮೀಕಿ, ವರ್ಡ್ಸ್‌ವರ್ತ್, ಷೆಲ್ಲಿ ಯಾವುದರಿಂದಲೂ ತೃಷೆ ಹಿಂಗಲಿಲ್ಲ. ಕೊನೆಗೆ ಆಂಗ್ಲೇಯ ಸಮಾಜ ಪದ್ಧತಿಗಳನ್ನು ಅನುಕರಣೆ ಮಾಡುತ್ತಿದ್ದ ಬ್ರಾಹ್ಮಸಮಾಜಕ್ಕೆ ಸೇರಿದನು. ಇದೆಲ್ಲದರ ಪರಿಣಾಮವಾಗಿ ಸಂದೇಹವಾದಿಯಾದನು. ಒಂದು ರೀತಿಯ ನಾಸ್ತಿಕ ಮನೋಭಾವಕ್ಕೆ ಬಲಿಯಾದನು. ಬಾಲ್ಯದಿಂದಲೂ ತದೇಕ ಚಿತ್ತದಿಂದ ಕೇಳುತ್ತಿದ್ದ ಹಿಂದೂ ದೇವದೇವತೆಗಳಲ್ಲಿ ನಂಬಿಕೆ ಕಳೆದುಕೊಂಡನು. ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಯಲು ಗುರುವಿನ ಮಾರ್ಗದರ್ಶನ ಬೇಕಿಲ್ಲವೆಂದು ಸಾರತೊಡಗಿದನು.

> ಸ್ಪೆನ್ಸರ್, ಡಾರ್ವಿನ್‌ರಿಂದ ತುಂಬಿಹೋಗಿದ್ದ ನರೇಂದ್ರನು ನಾಸ್ತಿಕನಾಗಿ, ಅದರಿಂದ ಅಶಾಂತನಾಗಿ ಶ್ರೀರಾಮಕೃಷ್ಣರನ್ನು ಸಂಧಿಸಿದ. ಅವರ ತಾಳ್ಮೆಯುಕ್ತ ದಯೆಯಿಂದ ನರೇಂದ್ರನು ಅವರ ಅತ್ಯಂತ ನಿಷ್ಠಾವಂತ ಶಿಷ್ಯನಾಗಿ ಪರಿವರ್ತನೆಗೊಂಡ.
>
> – *ವಿಲ್ ಡ್ಯುರಾಂಟ್*

ಇಂತಹ ಸಮಯದಲ್ಲಿ ಆತನ ಜೀವನದ ಗತಿಯನ್ನೇ ಬದಲಿಸಿದ ಘಟನೆಯೊಂದು ಘಟಿಸಿತು. ವಿವಾಹಕ್ಕಾಗಿ ಒತ್ತಾಯಿಸುತ್ತಿದ್ದ ಮನೆಯವರ ವಿರುದ್ಧ ಹೋರಾಡುತ್ತಿದ್ದ ನರೇಂದ್ರನನ್ನು ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲಿ ಶ್ರೇಷ್ಠರಾದ ರಾಮಚಂದ್ರ ದತ್ತ ಮಹಾಶಯರು ಶ್ರೀರಾಮಕೃಷ್ಣರ ಬಳಿ ಕರೆದೊಯ್ದರು. ಪ್ರಾರಂಭದಲ್ಲಿ ಅವರ ದರ್ಶನಗಳನ್ನು, ಅತೀಂದ್ರಿಯ ಅನುಭವಗಳನ್ನು ಮಾನಸಿಕ ಅಸ್ವಾಸ್ಥ್ಯತೆಯ ಪರಿಣಾಮವೆಂದು ಅಲ್ಲಗೆಳೆದರೂ ಕ್ರಮೇಣ ಸ್ಪರ್ಶಮಣಿಯ ಸ್ಪರ್ಶದಿಂದ ಕಬ್ಬಿಣವೂ ಚಿನ್ನವಾಗುವಂತೆ ಅವರ ಪ್ರೀತಿಯ ಸ್ಪರ್ಶದಿಂದ ಎಲ್ಲವನ್ನು ಒಪ್ಪಿಕೊಂಡನು. ಆದರೆ ಆರು ವರ್ಷಗಳ ನಿರಂತರ ಹೋರಾಟದ ದುರ್ಗಮ ಹಾದಿಯದು. ಬ್ರಾಹ್ಮಸಮಾಜದ ಪ್ರಭಾವದಿಂದಾಗಿ ಮೂರ್ತಿಪೂಜೆಯನ್ನು ಒಪ್ಪದ ನರೇಂದ್ರನು ಕಾಳಿಯ ಆರಾಧಕನಾದನು. ಅವನು ಕಾಳಿಯನ್ನು ಒಪ್ಪಿಕೊಂಡ ದಿನದಂದು ಶ್ರೀರಾಮಕೃಷ್ಣರ ಆನಂದಕ್ಕೆ ಪಾರವೇ ಇರಲಿಲ್ಲ. ಅವರೆಡೆಗೆ ಬಂದವರೊಡನೆ ಈ ವಿಷಯವನ್ನು ಹೇಳಿಕೊಂಡು ನಲಿದಾಡಿದರು. ನರೇಂದ್ರನ ಜೀವನದಲ್ಲಿ ಅದೊಂದು ಪರ್ವದಿನವಾಯಿತು.

ನರೇಂದ್ರನು ಅದ್ವೈತದ ಸತ್ಯತೆಯನ್ನು ಅಲ್ಲಗೆಳೆಯುತ್ತಿದ್ದನು. "ಇದ್ಹೇಗೆ ಸಾಧ್ಯ? ಈ ಪಾತ್ರೆಯೂ ದೇವರೆ, ಆ ಬಟ್ಟಲೂ ದೇವರೆ ಮತ್ತು ನಾವೂ ದೇವರೆ. ಇದಕ್ಕಿಂತ ಅಸಂಬದ್ಧವಾದುದು ಏನಿರಲು ಸಾಧ್ಯ?" ಎಂದು ಲೇವಡಿ ಮಾಡುತ್ತಿದ್ದ ಅವನನ್ನು ದೀನದಲಿತರಲ್ಲಿ, ಮೂರ್ಖರಲ್ಲಿ, ದರಿದ್ರರಲ್ಲಿ ದೇವರನ್ನು ಕಾಣುವಂತೆ ಶ್ರೀರಾಮಕೃಷ್ಣರು ಪರಿವರ್ತಿಸಿದರು. ಕ್ರಮೇಣ ನರೇಂದ್ರನನ್ನು ಸಂದೇಹದಿಂದ ಸಫಲತೆಯೆಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ, ಬೇಗುದಿಯಿಂದ ಪ್ರಶಾಂತಿಯೆಡೆಗೆ, ಬಂಧನದಿಂದ ಮುಕ್ತಿಯೆಡೆಗೆ, ದ್ವೈತದಿಂದ ಅದ್ವೈತದೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ದರು. ಹೀಗೆ

ಅವನ ದೈಹಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಬೆಳವಣಿಗೆಯನ್ನು ಪ್ರೋಷಿಸಿ ಅವನು ಸಹಸ್ರದಲ ಪದ್ಮವಾಗಿ ಅರಳಿ ನಿಲ್ಲುವಂತೆ ಮಾಡಿದರು.

ಆಗಸ್ಟ್ ೧೬. ೧೮೮೬ರಂದು ಶ್ರೀರಾಮಕೃಷ್ಣರ ಮಹಾಸಮಾಧಿಯ ಬಳಿಕ ನರೇಂದ್ರನಾಥನ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಮಾನವತ್ವದಿಂದ ದೈವತ್ವಕ್ಕೇರಿದ್ದ ನರೇನನು ವಿಶ್ವಮಾನವತ್ವದೆಡೆಗೆ ಸಾಗಬೇಕಿತ್ತು. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ, ಅದ್ವೈತದಲ್ಲಿ ನೆಲೆನಿಲ್ಲುವ ಪ್ರತಿಜ್ಞೆಯಿಂದ ಗುರುಭಾಯಿಗಳೊಡನೆ ಸಂನ್ಯಾಸದೀಕ್ಷೆ ಸ್ವೀಕರಿಸಿ ಬಾರಾನಗರ ಮಠದಲ್ಲಿ ಮೂರು ವರ್ಷಗಳ ಕಾಲ ತೀವ್ರಸಾಧನೆಯಲ್ಲಿ ಮುಳುಗಿದನು. ಇದರಿಂದ ಆತನ ಆಧ್ಯಾತ್ಮಿಕ ಪಿಪಾಸೆ ಮತ್ತಷ್ಟು ತೀವ್ರವಾಯಿತು. ತೀರ್ಥಯಾತ್ರೆಯ ಒಲವು ಹಿಂದೂ ಸಂನ್ಯಾಸಿಯ ಲಕ್ಷಣ. "ಹರಿಯುವ ನೀರು, ಅಲೆದಾಡುವ ಸಂನ್ಯಾಸಿಯು ಕಲ್ಮಷವಾಗರು" ಎಂಬ ನಾಣ್ನುಡಿಯು ಪ್ರಚಲಿತ. ಸಮಸ್ತ ಭಾರತ ಪರಿಭ್ರಮಣ ಮಾಡುವ ಉತ್ಕಟ ಆಕಾಂಕ್ಷೆ ಉದಯವಾಯಿತು. "ಸ್ಪರ್ಶಮಾತ್ರದಿಂದ ಮನುಷ್ಯನನ್ನು ಪರಿವರ್ತಿಸುವ ಆಧ್ಯಾತ್ಮಿಕ ಶಕ್ತಿ ಗಳಿಸದ ಹೊರತು ಹಿಂದಿರುಗಿಬಾರೆನು" ಎಂದು ದೃಢ ಶಪಥ ಮಾಡುತ್ತ ಜುಲೈ ೧೮೯೦ರಲ್ಲಿ ವಿವಿದಿಶಾನಂದರು ಎಂಬ ನಾಮಾಂಕಿತದಿಂದ ಒಂದು ಕಮಂಡಲು, ದಂಡ, ಗೀತೆ ಹಾಗೂ "*ಇಮಿಟೇಷನ್ ಆಫ್ ಕ್ರೈಸ್ಟ್* "ನ ಪ್ರತಿ ಹಿಡಿದು ಪರಿವ್ರಾಜಕರಾಗಿ ಹೊರಟೇಬಿಟ್ಟರು.

ಸುಮಾರು ಆರು ವರ್ಷಗಳ ಪರಿವ್ರಾಜಕ ಅವಸ್ಥೆ ಮತ್ತೊಂದು ಬಗೆಯ ಮಹತ್ತರ ಸಾಧನೆಯಾಯಿತು. ರಾಜಮಹಾರಾಜರು, ಶ್ರೀಮಂತರು, ಬಡವರು, ಪಂಡಿತರು, ಪಾಮರರು, ಆತ್ಮಜ್ಞಾನಿಗಳನ್ನು ಸಂದರ್ಶಿಸಿದರು. ಭಾರತದ ಬಡತನವನ್ನು ಕಣ್ಣಾರೆ ಕಂಡರು. ದೀನದಲಿತರ ದುಃಖ, ಕಷ್ಟಪರಂಪರೆಗಳನ್ನು ನೋಡಿ ಮಮ್ಮಲ ಮರುಗಿದರು. ಜನಸಾಮಾನ್ಯರ ಅಜ್ಞಾನವನ್ನು ನೋಡಿ ಕಣ್ಣೀರಿನ ಕೋಡಿ ಹರಿಸಿದರು. ಈಗ ಯುವಕ ನರೇಂದ್ರ, ಸಂನ್ಯಾಸಿ ವಿವಿದಿಶಾನಂದರು ವಿವೇಕಾನಂದರಾಗಿ ಪ್ರಪಂಚದ ಸುಧಾರಕರಾಗಿ ಪರಿವರ್ತನಗೊಂಡರು. ಭಾರತದ ಉದ್ಧಾರಕ್ಕೆ ಧನ ಸಹಾಯದ ಅಗತ್ಯವನ್ನು ಕಂಡುಕೊಂಡ ಅವರು ಅದು ಭಾರತದಲ್ಲಿ ಸಿಗುವುದಿಲ್ಲ, ಬರೀ ಬಾಯಿಮಾತಿನಿಂದ ಪ್ರಯೋಜನವಿಲ್ಲ, ಅಮೆರಿಕದಲ್ಲಿ ಧನಸಂಪಾದಿಸಿ ಅದರಿಂದ ಭಾರತದ ಕೆಲಸ ಮಾಡಬೇಕೆಂದು ನಿರ್ಧರಿಸಿದರು. ೧೮೯೩, ಸೆಪ್ಟೆಂಬರ್‌ನಲ್ಲಿ ಷಿಕಾಗೋ ನಗರದಲ್ಲಿ ವಿಶ್ವಧರ್ಮ ಸಮ್ಮೇಳನವನ್ನು ನಡೆಸುವ ಯೋಜನೆ ಸಿದ್ಧವಾಗಿತ್ತು. ಅದರಲ್ಲಿ ಭಾಗವಹಿಸಿ ಹಿಂದೂ ಧರ್ಮವನ್ನು ಪ್ರತಿನಿಧಿಸುವ ನಿರ್ಧಾರವನ್ನು ಕೈಗೊಂಡರು. ತಾಯ್ನಾಡಿನ ಹೀನಸ್ಥಿತಿಗೆ ಪ್ರತಿಸ್ಪಂದಿಸುತ್ತಾ "ಈ ಸಮಾಜದ ಮೇಲೆ ಬಾಂಬಿನಂತೆ ಬೀಳುವವರೆಗೂ ಹಾಗೂ ಅದು ನಾಯಿಯಂತೆ ನನ್ನನ್ನು ಹಿಂಬಾಲಿಸುವವರೆಗೂ ಹಿಂತಿರುಗಿ ಬರಲಾರೆ" ಎಂಬ ಧೀರಪ್ರತಿಜ್ಞೆಯನ್ನು ಕೈಗೊಂಡರು.

ಸಮ್ಮೇಳನದಲ್ಲಿ ಅವರ ವ್ಯಕ್ತಿತ್ವ ಬೀರಿದ ಪ್ರಭಾವ ಇತಿಹಾಸವೇ ಆಯಿತು. ಮುಂದೆ ಅವರ ಪಟ್ಟಶಿಷ್ಯೆಯಾದ ಸೋದರಿ ನಿವೇದಿತೆಯು "ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ"ಗೆ ಬರೆದ ಪೀಠಿಕೆಯಲ್ಲಿ ಇದರ ನಸುನೋಟ ನಮಗೆ ಸಿಗುತ್ತದೆ, "ಭಾರತವು ವಿವೇಕಾನಂದರ ಮೂಲಕ ಬೆಳಗಿಸಿದ ದೀಪವು ದೇಶದ ಜನತೆಗೂ, ಜಗತ್ತಿಗೂ ಮಾರ್ಗದರ್ಶನ ನೀಡುವಂತಹದಾಗಿತ್ತು. ಈ ಬೆಳಕನ್ನು ನೀಡಿದ್ದಕ್ಕಾಗಿ ಮತ್ತು ಅವರ ಮೂಲಕ ನಮಗೆ ಬಂದಿರುವ ಈ ಸಾಹಿತ್ಯ ನಿಧಿಗಾಗಿ ನಮ್ಮಂತಹ ಕೆಲವರು ಆ ವ್ಯಕ್ತಿಯನ್ನು ನೀಡಿದ ಈ ದೇಶಕ್ಕೆ ಮತ್ತು ಅವರನ್ನು ಹೊರದೇಶಕ್ಕೆ ಕಳುಹಿಸಿದವರಿಗೆ ಶುಭವನ್ನು ಹಾರೈಸುತ್ತೇವೆ ಮತ್ತು ಅವರು ನೀಡಿದ ಸಂದೇಶದ ವೈಶಾಲ್ಯ ಮತ್ತು ವೈಶಿಷ್ಟ್ಯ ನಮಗಿನ್ನೂ ಅರ್ಥವಾಗಿಲ್ಲವೆಂದೂ ನಂಬುತ್ತೇವೆ."

> ಸ್ವಾಮೀಜಿಯವರಲ್ಲಿ ನನ್ನ ಗಮನವನ್ನು ಸೆಳೆದುದು ಅವರ ಅಸೀಮ ವ್ಯಕ್ತಿತ್ವ. ಅವರ ನೆತ್ತಿಯನ್ನಾಗಲಿ ತಳವನ್ನಾಗಲಿ ಬದಿಗಳನ್ನಾಗಲಿ ನನಗೆ ಸ್ಪರ್ಶಿಸಲಾಗಲೇ ಇಲ್ಲ. ಅಬ್ಬ! ಅದೆಂಥ ಬೆರಗುಗೊಳಿಸುವ ಗಾತ್ರ ಅವರದು! — *ಜೊಸೆಫಿನ್ ಮ್ಯಾಕ್ಲೋಡ್*

ಹೀಗೆ ಸ್ವಾಮಿ ವಿವೇಕಾನಂದರು ಸಹಜವಾಗಿಯೇ ವಿಶ್ವಮಾನವರಾದರು. ಅವರ ವ್ಯಕ್ತಿವೈಶಾಲ್ಯಕ್ಕೆ ಎಲ್ಲರೂ ಅಚ್ಚರಿಗೊಳ್ಳುವಂತಾಯಿತು. ೧೮೯೪ರ ಜುಲೈ ತಿಂಗಳಲ್ಲಿ ಫ್ರಾನ್ಸಿಸ್ ಲೆಗೆಟ್‌ಗೆ ಬರೆದ ಪತ್ರದಲ್ಲಿ ವಿವೇಕಾನಂದರು ತಾವು ಹೇಗೆ ವಿಕಾಸ ಹೊಂದಿದರೆಂಬುದನ್ನು ತಾವೇ ಗುರುತಿಸಿದ್ದಾರೆ: "ನನಗೆ ಇಪ್ಪತ್ತು ವಯಸ್ಸಾಗಿದ್ದಾಗ ಅತ್ಯಂತ ಅನುಕಂಪ ವಿಹೀನನಾಗಿದ್ದೆ. ಎಂದಿಗೂ ರಾಜಿಯಾಗದ ಧರ್ಮಾಂಧನೂ ಆಗಿದ್ದೆ. ಕಲ್ಕತ್ತಾ ನಗರದಲ್ಲಿ ನಾಟಕಶಾಲೆಗಳಿರುವ ದಾರಿಯ ಪಕ್ಕದಲ್ಲಿ ಕೂಡ ನಡೆಯುತ್ತಿರಲಿಲ್ಲ. ನನ್ನ ೩೩ನೆಯ ವಯಸ್ಸಿನಲ್ಲಿ ವೇಶ್ಯಾಂಗನೆಯರನ್ನೂ ಕೂಡ ಒಮ್ಮೆಯಾದರೂ ನಿಂದೆಯ ಮಾತುಗಳಿಂದ ನೋಯಿಸುವುದನ್ನು ಸಹಿಸಲಾರೆ. ಇದೇನು ಹೀನ ಸ್ಥಿತಿಯೋ? ಅಥವಾ ನಾನೂ ದೇವತಾಸ್ವರೂಪವಾದ ವಿಶ್ವಪ್ರೇಮದ ಸ್ಥಿತಿಗೆ ವಿಕಾಸವಾಗುತ್ತಿರುವೆನೋ?.... ನನಗೆ ಎಲ್ಲರನ್ನೂ ಪ್ರತಿವಸ್ತುವನ್ನೂ ಹರಸಬೇಕೆಂದೆನಿಸುತ್ತದೆ. ಎಲ್ಲವನ್ನೂ ಪ್ರೀತಿಸಿ ಆಲಂಗಿಸಬೇಕೆಂದೆನಿಸುತ್ತದೆ."

ನಿರಂತರ ಸಾಧನೆಯಿಂದ ನರೇಂದ್ರನು ತನ್ನನ್ನು ತಾನು ಕೆತ್ತಿಕೊಳ್ಳುತ್ತಾ ಲೋಕವಿಖ್ಯಾತ ಸ್ವಾಮಿ ವಿವೇಕಾನಂದರಾದರು. "ಶಾಸ್ತ್ರ, ಗುರು ಮತ್ತು ಮಾತೃಭೂಮಿ—ಈ ಮೂರು ಶ್ರುತಿಗಳು ಮೇಳವಿಸಿ ವಿವೇಕಾನಂದರ ಕ್ರಿಯಾಸಂಗೀತವನ್ನು ನಿರ್ಮಿಸಿದವು" ಎಂದು ನಿವೇದಿತಾ ಹೇಳುತ್ತಾರೆ. ತಮ್ಮ ಬುದ್ಧಿಶಕ್ತಿಯ ಮೂಲಕ ಪಡೆದ ಅಪಾರ ಶಾಸ್ತ್ರಜ್ಞಾನ, ಗುರುಮುಖೇನ ಪಡೆದ ಅಧ್ಯಾತ್ಮ ಸಂಪತ್ತು ಮತ್ತು ಪರಿವ್ರಾಜಕ ಜೀವನಾವಧಿಯಲ್ಲಿ ಪಡೆದ ವೈವಿಧ್ಯಮಯ ಅನುಭವಗಳು—ಇವುಗಳೇ ವಿವೇಕಾನಂದರ ವ್ಯಕ್ತಿತ್ವವನ್ನೂ ಅವರ ವಿಶ್ವಸಂದೇಶವನ್ನೂ ರೂಪಿಸಿದ ಅಂಶಗಳು ಎನ್ನಬಹುದು.